ಮಂಜೂರಾತಿಯನ್ನು ಕೂಡಲೆಕ್ಕಾಗಿ ಈದು ಸರ್ಕಾರದ ಮಟ್ಟದಲ್ಲಿದೆ. ಆಡಳಿತಾತ್ಮಕ ಮಂಜೂರಾತಿಯಾದ ಮೇಲೆ ಕಟ್ಟಡದ ಕೆಲಸವನ್ನು ಮಾಡುತ್ತೇವೆ. ನನಗೂ ಸ್ವಲ್ಪಮಟ್ಟಿಗೆ ಆದರಲ್ಲಿ ಆಸಕ್ತಿ ಇದೆ.

ಶ್ರೀ ಎಂ. ಪಿ. ಅಪ್ಪಯ್ಯ ರಂಜನ್ : ಮಾನ್ಯ ಅಧ್ಯಕ್ಷರೆ, ನನ್ನ ಇನ್ನೊಂದು ಪ್ರಶ್ನೆಗೆ ಉತ್ತರ ಬರಲಿಲ್ಲ, ಸರ್ಕಾರ ಆಸ್ಪತ್ರೆಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆಯೆ ಎಂದು ಕೇಳಿದ್ದೇನೆ. ಜಮೀನನ್ನು ವಶಪಡಿಸಿಕೊಂಡಿದೆಯೆ? ಆಥವಾ ಇಲ್ಲವೆ?

ಶ್ರೀ ಎಂ. ಸಿ. ನಾಣಯ್ಯ : ನಾವು ಆಡಳಿತಾತ್ಮಕ ಮಂಜೂರಾತಿಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಅಲ್ಲಿ ಸರ್ಕಾರಿ ಜಮೀನು ಇದೆ, ಆ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಎಂ. ಪಿ. ಅಪ್ಪಯ್ಯ ರಂಜನ್ : ಸರ್ಕಾರದ ಜಮೀನು ಇದ್ದು, 1½ ಎಕರೆ ಜಮೀನಿನ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ ಅದನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಅಧ್ಯಕ್ಷರೆ, ಅದನ್ನು ಮಾಡುತ್ತೇವೆ.

ಉಡುಪಿ ಸಾರ್ವಜನಿಕ ಆಸ್ಪತ್ರೆ ಕುರಿತು

157 - ಶ್ರೀ ಯು.ಆರ್. ಸಭಾಪತಿ (ಉಡುಪಿ ಕ್ಷೇತ್ರ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಸಾರ್ವಜನಿಕ ಮತ್ತು ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ, ಇಲ್ಲಿ, ಮಂಜೂರಾದ ವೈದ್ಯರುಗಳ ಮತ್ತು ವೈದ್ಯಕೇತರುಗಳ ಹುದ್ದೆ ಎಷ್ಟು? ಖಾಲಿ ಇರುವ ಹುದ್ದೆಗಳೆಷ್ಟು?

ಆ) ಇಷ್ಟು ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಡಾ:: ಹೆಚ್.ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಈ ಆಸ್ಪತ್ರೆಗೆ ಮಂಜೂರಾದ ಹುದ್ದೆ ಹಾಗೂ ಖಾಲಿ ಇರುವ ಹುದ್ದೆಗಳ ಮಾಹಿತಿ ಈ ಕೆಳಕಂಡಂತಿವೆ.

		ಮಂಜೂರು	ಕಾರ್ಯನಿರ್ವಹಣೆ	ಹುದ್ದೆ - ಖಾಲಿ
1.	ವೈದರು	18	9	9
2.	ವೈದ್ಯರೇತರ ಹುದ್ದೆಗಳು	144	118	26
	ಒಟ್ಟು	**162**	**127**	**35**

ಆ) ಗಮನಕ್ಕೆ ಬಂದಿದೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಹಾಲೆ ಕಲಸ ನಿರ್ವಹಿಸುತ್ತಿರುವ ವೈದ್ಯರುಗಳು ಸೇವೆ ಸಲ್ಲಿಸುತ್ತಿರುತ್ತಾರೆ. ವೈದ್ಯರ ಮುದ್ದೆಗಳನ್ನು ಮತ್ತು ಗ್ರೂಪ್. ಸಿ ಮತ್ತು ಗ್ರೂಪ ಡಿ. ದರ್ಜೆ ನೌಕರರ ಖಾಲಿ ಮುದ್ದೆಗಳನ್ನು ಅದ್ಯತೆ ಮೇಲೆ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಈ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಮುದ್ದೆಗಳು ಹಿರಿಯ ತಜ್ಞ ವೈದ್ಯ ಮುದ್ದೆಗಳೆಂದು ಗುರುತಿಸಲ್ಪಟ್ಟಿದ್ದು, ವೈದ್ಯರುಗಳಿಗೆ ಕಾಲಮಿತಿ ಪದೋನ್ನತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಪದೋನ್ನತಿ ನೀಡುವಾಗ ಅದ್ಯತೆ ಮೇಲೆ ಖಾಲಿ ಮುದ್ದೆಗಳನ್ನು ತುಂಬಲಾಗುವುದು. ಸಿ ಮತ್ತು ಡಿ ಗುಂಪುಗಳ ಕ್ರಮಕ್ಕೆಗೊಳಲಾಗುವುದು.

ಶ್ರೀ ಪಸಂತ ಪಿ. ಶಾಲಿಯಾನ (ಯು.ಆರ್. ಸಭಾಪತಿಯರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಉಡುಪಿ ಸಾರ್ವಜನಿಕ ಪಿರಿಗ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸುಮಾರು ಒಂಭತ್ತು ವೈದ್ಯರ ಕೊರತೆ ಇದೆ, ಈಗ ಅಲ್ಲಿ ಎಷ್ಟು, ತಜ್ಞ ವೈದ್ಯರ ಮುದ್ದೆಗಳು ಖಾಲಿ ಇದೆಯೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದರಿಂದಾಗಿ ಬಡಪ ಪ್ರಾಮುಖ್ಯವಾಗಿ ಒಂದು ಉಡುಪಿ ತಾಲ್ಲೂಕು ಆಸ್ಪತ್ರೆಯಾಗಿದೆಯೆ ಎಂದು ಪ್ರಶ್ನೆಯನ್ನು ಕೇಳಿದ್ದೇನೆ ಅದಕ್ಕೆ ಕಾರಣ ಇದರಲ್ಲಿ ಅನೇಕ ಸಾರ್ವಜನಿಕರಿಗೆ ಇದರಲ್ಲಿ ತೊಂದರೆಯಾಗಿದೆ.

10.00 ಪಿ.ಎಂ.

ಆದುದರಿಂದ ನನ್ನ ಪ್ರಶ್ನೆ ಇಷ್ಟೆ, ವೈದ್ಯರಲ್ಲಿ ತಜ್ಞ ವೈದ್ಯರು ಎಷ್ಟು ಬಾಕಿ ಇದ್ದಾರೆ. ಈ 9 ಜನ ವೈದ್ಯರನ್ನು ಯಾವಾಗ ನೇಮಕ ಮಾಡುತ್ತೀರಿ, ಗ್ರೂಪ್ (ಸಿ) ಮತ್ತು (ಡಿ) ಯವರು ಈ 20ರಲ್ಲಿ ಎಷ್ಟು ಜನರು ಇದ್ದಾರೆ.

ಶ್ರೀ ಎಂ. ಪಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಉತ್ತರದಲ್ಲಿ 18 ಮುದ್ದೆಗಳಲ್ಲಿ 9 ಮುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೇವೆ. ಅದರಲ್ಲಿ 8 ಹಿರಿಯ ತಜ್ಞವೈದ್ಯರ ಮುದ್ದೆಗಳು ಖಾಲಿ ಇವೆ. ಅದರಲ್ಲಿ ಒಂದು ಪಂತ ವೈದ್ಯ ಮುದ್ದೆ ಖಾಲಿ ಇದೆ. ಈ 8 ತಜ್ಞ ಮುದ್ದೆಯನ್ನು ತುಂಬಲು ಬದ್ಧ ಕೊಡುತ್ತಿದ್ದೇವೆ. ಒಂದು ವರ್ಷದಿಂದ 7 ವರ್ಷಗಳವರಗೆ ಕಲಸ ಮಾಡಿರುವವರನ್ನು ಸ್ಪೆಷಲಿಸ್ಟ್ ಎಂದು ಮಾಡಿ, 14 ವರ್ಷಗಳವರಗೆ ಇದ್ದವರನ್ನು ಸೀನಿಯರ್ ಸ್ಪೆಷಲಿಸ್ಟ್ ಎಂದು ಮಾಡುತ್ತಿದ್ದೇವೆ. ಇವೆಲ್ಲವೂ ಎರಡನೆಯ ಗ್ರೇಡಗೆ ಬರುತ್ತವೆ. 7 ವರ್ಷಗಳಿಂದ 14 ವರ್ಷಗಳಲ್ಲಿ ಹಿರಿಯಂಥ ಸ್ಪೆಷಲಿಸ್ಟಗಳನ್ನು ಮಾಡುವೇಕಾಗುತ್ತದೆ. ಈ ಕಲಸವನ್ನು ಅದ್ಯತೆಯ ಮೇಲೆ ಮಾಡುತ್ತಿದ್ದೇವೆ. ಇವನ್ನು ಕಾಂಟ್ರಾಕ್ಟ ಬೇಸಿನಲ್ಲಾಗಲೆ ಅಥವಾ ಡೀಪುಟೇಶನಾಗಿ ನೇಮಕ ಮಾಡುವಂಥಾಗಲೆ ಮಾಡುವುದಕ್ಕೆ ಆಗುವುದಿಲ್ಲ. ಅದು ತಮಗೂ ಗೊತ್ತಿದೆ. ಆದುದರಿಂದ ಇದನ್ನು ಅದ್ಯತೆಯ ಮೇಲೆ ತುಂಬುವಂತಹ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ. 'ಡಿ' ವರ್ಜಿಯ ಮುದ್ದೆಗಳಿಗೆ ಸಂಬಂಧಪಟ್ಟಹಾಗೆ ಸರ್ಕಾರ ಪ್ರಕ್ರಿಯೆಯನ್ನು ಶುರು ಮಾಡಿದೆ. ಅಕಾಡೆಮಿಕ್ ಮೇಜರ್ ವಿಷಯಂಥವನ್ನು ಈ ಆಯಾಯಲ್ಲಿ ಆಳವಡಿಸಿಯಾರೆಯೆಂದು ಹೇಳಿ, ಸರ್ಕಾರ ಇದರ ಬಗ್ಗೆ ಈಗಾಗಲೇ ಕಾರ್ಯ ಪ್ರವೃತ್ತವಾಗಿದೆ. ಈ ಮುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ.

ಶ್ರೀ ವಸಂತ ವಿ. ಸಾಲಿಯಾನ್ : ಮಾನ್ಯ ಅಧ್ಯಕ್ಷರೆ, ಈ ಡಾಕ್ಟರಗಳ ಮತ್ತು ಇತರ ಸಿಬ್ಬಂದಿಗಳ ಕೊರತೆ ಎಷ್ಟು ವರ್ಷಗಳಿಂದ ಇದೆ? ಇದು ಬಹಳ ಪ್ರಾಮುಖ್ಯವಾದ ವಿಷಯ, ನನಗೆ ತಿಳಿದ ಮಟ್ಟಿಗೆ ಇದು ಬಹಳ ವರ್ಷಗಳಿಂದ ಬಾಕಿ ಇದೆ. ಆದುದರಿಂದ ನಾನು ತಮ್ಮ ಮುಖೇನಾ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಬಹಳ ವರ್ಷಗಳಿಂದ ಎಂದರೆ ನಿಮಗೆ ಕಿಟ್ಟಿ ಹೆಸರು, ಏಕೆಂದರೆ ಮೊದಲಿನಿಂದಲೂ ನೀವೇ ಇದ್ದವರು.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಆದುದರಿಂದ ನಾನು ಕೇಳುವುದೇನೆಂದರೆ ಅಲ್ಲಿ ತಜ್ಞ ವೈದ್ಯರುಗಳ ಅವಶ್ಯಕತೆ ಬಹಳ ಪ್ರಾಮುಖ್ಯವಾಗಿ ಬೇಕಾಗಿದೆ. ಏಕೆಂದರೆ ಮಕ್ಕಳ ಆರೋಗ್ಯ ಮತ್ತು ಹೆರಿಗೆಯ ಬಗ್ಗೆ ಇವರ ಅವಶ್ಯಕತೆ ಇದೆ. ಆದುದರಿಂದ ತಜ್ಞ ವೈದ್ಯರುಗಳನ್ನು ಮತ್ತು ಇತರ ಸಿಬ್ಬಂದಿವರ್ಗದವರು ಕೂಡಲೇ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದೇವೆ. ಅಲ್ಲಿ ಮುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇದೆ ಎಂದರೆ ನಿಮ್ಮ ಅಡಳಿತದ 5 ವರ್ಷಗಳು ಸೇರಿ ನಮ್ಮ ಒಂದು ವರ್ಷ ಎರಡು ತಿಂಗಳುಗಳು ಸೇರಿ ಸುಮಾರು 6 ವರ್ಷ ಎರಡು ತಿಂಗಳುಗಳಿಂದ ಎಂದು ನನ್ನ ಹತ್ತಿರ ಪಟ್ಟಿ ಇದೆ. ಇದರ ಹಿಂದಿನ ಮಾಹಿತಿಯ ಪಟ್ಟಿ ನನ್ನ ಬಳಿ ಇಲ್ಲ.

ಸರ್ಕಾರಿ ಕಾರ್ಯಕ್ರಮಗಳಿಗೆ ಶಾಲಾ ಮಕ್ಕಳನ್ನು ಕರೆ ತರುತ್ತಿರುವುದು

158 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸರ್ಕಾರಿ ಕಾರ್ಯಕ್ರಮಗಳಿಗೆ ಶಾಲಾ ಮಕ್ಕಳನ್ನು ಕರೆತರುವುದನ್ನು ನಿಲ್ಲಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಹಲವಾರು ಸರ್ಕಾರಿ ಕಾರ್ಯಕ್ರಮಗಳಿಗೆ ಶಾಲಾ ಮಕ್ಕಳನ್ನು ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ರೀತಿ ಶಾಲಾ ಮಕ್ಕಳನ್ನು ಸರ್ಕಾರಿ ಕಾರ್ಯಕ್ರಮಗಳಿಗೆ ಉಪಯೋಗಿಸಿ ಕೊಂಡರೆ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?*

ಶ್ರೀ ಪ್ರೊ. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಹೌದು.